ಮರಗಳ ಮರೆಯಲ್ಲಿ ಮಾಯವಾಗಿಬಿಟ್ಟಿತು!

ಅಯ್ಯೋ... ಎಂದು ನಾನು ಭಯದಿಂದ ಕೂಗಾಡುವುದನ್ನು ಹಾಗೂ ಕೈಗಳನ್ನು ಬೀಸುತ್ತಿರುವುದನ್ನು ಕಂಡ ಹಿರಿಯ ಮಗ ನಾನೆಲ್ಲಿ ಅಪಾಯಕ್ಕೆ ಸಿಕ್ಕಿರುವೆನೆಂದೋ, ಅಥವಾ ತನ್ನನ್ನು ಕರೆಯುತ್ತಿರುವೆನೆಂದೋ ಭಾವಿಸಿ ನೀರೆಡೆಗೆ ಬಂದೇಬಿಟ್ಟ! ಬರಬೇಡ.. ಬರಬೇಡ.. ಎಂದು ನಾನು ಕೈ ಮಾಡುವುದು ಅವನಿಗೆ ಬಾ.. ಬಾ.. ಎಂದು ಕರೆದಂತೆ ಭಾಸವಾಗಿರಬೇಕು. ಮಾರು, ಎರಡು ಮಾರು ದೂರ ಬರುವುದರೊಳಗೆ ನೀರಿನ ರಭಸಕ್ಕೆ ಸಿಕ್ಕು ಕೊಚ್ಚಿಕೊಂಡು ಹೋಗಲಾರಂಭಿಸಿದ!

ನಾನು ಮೇಲೆ ಹಾರುವ ಹದ್ದಿನಿಂದ ಮಗುವನ್ನು ರಕ್ಷಿಸಲೋ, ಕೆಳಗೆ ನೀರಿನಾಳಕ್ಕೆ ಕೊಚ್ಚಿಹೋದ ಮಗನನ್ನು ರಕ್ಷಿಸಲೋ.. ಸದ್ಯಕ್ಕೆ ಮೇಲೆ ಹಾರಿಹೋದ ಮಗು ಕೈಗೆ ಸಿಗುವುದು ದುರ್ಲಭ ಎಂದು ನೀರೊಳಗೆ ಕೊಚ್ಚಿಹೋದ ಮಗನನ್ನೇ ರಕ್ಷಿಸೋಣವೆಂದು ಆ ಕ್ಷಣಕ್ಕೆ ಅಂದುಕೊಂಡು ಬೀಸುಬಿದ್ದು ಈಜಲಾರಂಭಿಸಿದೆ. ಆದರೆ ನೀರಿನ ಸೆಳೆವು ಎಲ್ಲಿ ನಾನು ಹಿಡಿದುಕೊಂಡುಬಿಡುತ್ತೇನೋ ಎನ್ನುವಂತೆ ಬಿರುಸು ಬಿರುಸಾಗಿ ನನ್ನಿಂದ ನನ್ನ ಮಗನನ್ನು ದೂರ ದೂರ ಒಯ್ಯಲಾರಂಭಿಸಿತು!

ಅತ್ತ ಆ ಮಗುವಾದರೂ ಸಿಗುತ್ತದೇನೋ ಎನ್ನುವಂತೆ ಹದ್ದಿನ ಹಾರಾಟದ ಜಾಡು ನೋಡಿದರೆ, ಗಾವುದ ದೂರದಲ್ಲಿ ವೃತ್ತಾಕಾರದಲ್ಲಿ ಸುತ್ತುತ್ತಿರುವ ಕೆಲವನ್ನು ಬಿಟ್ಟರೆ ಸಮೀಪದಲ್ಲಿ ಒಂದೂ ಹಾರಾಡುತ್ತಿಲ್ಲ. ಎಲ್ಲೆಂದು ಹುಡುಕಲಿ. ಇಷ್ಟು ಹೊತ್ತಿಗೆ ಪಾಪ, ಎಳೆಕಂದನ ಆ ಹಸಿಮಾಂಸವನ್ನು ಹರಿದು ಹಂಚಿ ತಿಂದುಬಿಟ್ಟಿವೆಯೇನೋ..

ನನಗೆ ದಿಕ್ಕೇ ತೋಚಲಿಲ್ಲ. ಆಘಾತದ ಮೇಲೆ ಆಘಾತ. ನನ್ನ ಬಸುರಿ ಬಯಕೆಯ ನೆಪದಿಂದಾಗಿ ದಿನವೊಂದು ಕಳೆಯುವುದರೊಳಗಾಗಿ ಗಂಡನನ್ನು ಕಳೆದುಕೊಂಡೆ, ಎರಡು ಮಕ್ಕಳನ್ನೂ ಕಳೆದುಕೊಂಡೆ! ನತದೃಷ್ಟೆ ನಾನು.. ಪಾಪಿ ನಾನು.. ನಾನು ಬದುಕಿರಬಾರದು. ನಾನೂ ಸಾಯಬೇಕು ಎಂದು ನೀರಿನ ಸೆಳೆತಕ್ಕೆ ಕೊಚ್ಚಿಹೋಗಲಿ ದೇಹ ಎಂದು ಕೈಕಾಲು ಆಡಿಸುವುದನ್ನು ನಿಲ್ಲಿಸಿದೆ. ನಾನಾಗಿಯೇ ನೀರು ಕುಡಿದು ಸಾಯಲು ಪ್ರಯತ್ನಿಸಿದೆ. ಆದರೆ ಈಜು ಕಲಿತವರನ್ನು ತಾನು ಕೊಲ್ಲಲಾರೆನೆನ್ನುವಂತೆ ನೀರು ನನ್ನನ್ನು ತಂದು ದಡಕ್ಕೆ ಸೇರಿಸಿತು. ನೀರಿನೊಳಗೆ ನನ್ನ ಕಣ್ಣೀರು ಕಾಣದಂತೆ ಲೀನವಾಗಿಹೋಗಿತ್ತು.

ಕಳೆದುಕೊಳ್ಳಲು ನನ್ನಲ್ಲಿ ಇನ್ನೇನೂ ಉಳಿದಿರಲಿಲ್ಲ. ನಿರುಪಾಯಳಾಗಿ ಬರಿಗೈಯ್ಯಲ್ಲಿ ಶ್ರಾವಸ್ತಿಯತ್ತ ನಡೆದೆ. ಎಳೆದೂ ಎಳೆದು ಹಾಕುತ್ತಿದ್ದ ಕಾಲುಗಳು ನನ್ನ ದೇಹವನ್ನು ಹೊತ್ತೊಯ್ಯಲು ನಿರಾಕರಿಸುತ್ತಿದ್ದವು. ಅತ್ತೂ ಅತ್ತು ಮಂಜಾಗಿದ್ದ ಕಣ್ಣುಗಳು ದೃಷ್ಟಿಯನ್ನು ಹರಿಸಲು ಪ್ರತಿಭಟಿಸುತ್ತಿದ್ದವು. ದೇಹದಲ್ಲೂ ಕೈಕಾಲಲ್ಲೂ ಶಕ್ತಿಯಿಲ್ಲದೇ ದೇಹವೆನ್ನುವುದನ್ನು ನೆಲಕ್ಕೆ ಅಪ್ಪಳಿಸಲು ಕಾಯುತ್ತಿದ್ದವು. ಮೈಮೇಲಿನ ಬಟ್ಟೆಗಳೂ ದೇಹಕ್ಕೆ ಭಾರವೆನ್ನಿಸಿ ಎಲ್ಲೆಲ್ಲೋ ಬಿದ್ದುಹೋಗಲು ಹವಣಿಸುತ್ತಿದ್ದವು.

ಹಾಗೋ ಹೀಗೋ ಶ್ರಾವಸ್ತಿಯನ್ನು ತಲುಪಿದೆ. ಊರು ಸಾಕಷ್ಟು ಬೆಳೆದುಬಿಟ್ಟಿತ್ತು. ತವರುಮನೆಯನ್ನು ಅಂದಾಜಿನ ಮೇಲೆ ಹುಡುಕಿ ಬಂದೆ. ಆದರೆ ಅಲ್ಲಿ ಮನೆಯೇ ಇರಲಿಲ್ಲ! ಯಾರಿಗೋ ಕೇಳಿದೆ. ಆತ ನಿನ್ನೆ ಸುರಿದ ಭಾರೀ ಮಳೆಗೆ ಮನೆಯು ಕುಸಿದುಬಿದ್ದಿರುವುದಾಗಿ ಹೇಳಿದ. ನಾನು ಮತ್ತೊಂದು ಆಘಾತದಿಂದ ನಲುಗಿ, ಮನೆಯವರೆಲ್ಲ ಸುರಕ್ಷಿತವಾಗಿ ಇದ್ದಾರೆ ತಾನೇ ಎಂದು ಕೇಳಿದೆ. ಹೇಳಲು ಹಿಂದೆ ಮುಂದೆ ನೋಡಿದ ಆತ, ಪಶ್ಚಿಮದಲ್ಲಿ ಸೂರ್ಯನನ್ನೇ ದಹಿಸುತ್ತಿರುವಂಥ ಹೊಗೆಯತ್ತ ಕೈ ತೋರಿಸಿ, ಅದು ಅವರ ಸಂಸ್ಕಾರದ್ದೇ ಹೊಗೆಯೆಂದು ಹೇಳಿ, ಮರುಪ್ರಶ್ನೆಗೆ ಅವಕಾಶ ನೀಡದೇ ಹೊರಟುಬಿಟ್ಟ.

ಕುಕ್ಕರಿಸಿ ಕುಂತೆ. ಇಲ್ಲೇ ನೆಲ ಬಿರಿದು ನನ್ನನ್ನು ಆಪೋಶಣ ತೆಗೆದುಕೊಳ್ಳಬಾರದೇ ಎನ್ನಿಸಿತು. ಆದರೂ ಸಂಸ್ಕಾರದ ಸ್ಥಳಕ್ಕೆ ಧಾವಿಸಲು ಮನಸ್ಸು ಕಾತರಿಸಿತು. ಎದ್ದು ಓಡಿದೆ. ಶಕ್ತಿಯಿಲ್ಲದ ಕಾಲುಗಳಿಗೇ ಶಕ್ತಿ ಸಂಚಯಿಸಿ ದೌಡಾಯಿಸಿದೆ. ಜನರೆಲ್ಲಾ ಸಂಸ್ಕಾರ ಮುಗಿಸಿ ಊರ ಕಡೆ ಮರಳುತ್ತಿದ್ದವರು, ನನ್ನನ್ನು ಕಂಡು ಗುಸುಗುಸು ಮಾತಾಡುತ್ತಿದ್ದರು. ಓಡಿಹೋಗಿದ್ದ ಮಗಳು ಇವಳೇನೇ ಎನ್ನುವಂತೆ ಕಿಚಾಯಿಸುತ್ತಿರುವಂತೆನಿಸಿತು. ಅದ್ಯಾವ ಅಪಾದನೆಯನ್ನೂ ಮನಸ್ಸು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಯಾವ ಚಿತೆ ಅಪ್ಪನದು, ಯಾವುದು ಅಮ್ಮನದು; ಯಾವುದು ಅಣ್ಣನದು, ಅತ್ತಿಗೆಯದು ಯಾವುದು ಎಂದು ತಿಳಿಯದಾಯಿತು.